ನಿರ್ಧರಿಸಿ ಆದೇಶಿಸಿದೆ. ಸದರಿ ಮಿತವ್ಯಯ ಆದೇಶವು ಪ್ರಸ್ತುತವು ಜಾರಿಯಲ್ಲಿರುತ್ತದೆ.

ಉ) 521 ಪ್ರಾಥಮಿಕ ಶಾಲೆಗಳಲ್ಲಿ ಸರಾಸರಿ 05 ಶಿಕ್ಷಕರಂತೆ 2605 ಶಿಕ್ಷಕರಂತೆ ರೂ. 11,000 ರಂತೆ ವಾರ್ಷಿಕವಾಗಿ ರೂ. 34.39 ಕೋಟಿಗಳು.

440 ಪ್ರೌಢಶಾಲೆಗಳಲ್ಲಿ ಸರಾಸರಿ 07 ಶಿಕ್ಷಕರಂತೆ 3080 ಶಿಕ್ಷಕರಿಗೆ ರೂ. 13,000–00 ರಂತೆ ವಾರ್ಷಿಕವಾಗಿ ರೂ. 48.05 ಕೋಟಿಗಳು ಮತ್ತು 01 ದ್ವಿದಸ, 01 ಗ್ರೂಪ್ ಡಿ ನೌಕರರಿಗೆ ಒಟ್ಟು 80 ಬೋಧಕೇತರ ನೌಕರಿಗೆ ರೂ. 10,000ರಂತೆ ವಾರ್ಷಿಕವಾಗಿ ರೂ. 10.56 ಕೋಟಿಗಳು

ಊ) ಪ್ರಸ್ತುತ ಆರ್ಥಿಕ ಮಿತವ್ಯಯ ಆದೇಶ ಜಾರಿಯಲ್ಲಿದ್ದು, ಆರ್ಥಿಕ ಮಿತವ್ಯಯ ಆದೇಶ ಹಿಂತೆಗೆದುಕೊಂಡ ನಂತರ, ಅನುದಾನಕ್ಕೆ ಒಳಪಡಿಸಲು ನಿಯಮಾನುಸಾರವಾಗಿ ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದು.

ಪಿ.ಯು. ಅತಿಥಿ ಉಪನ್ಯಾಸಕಾರ ಸಂಬಳ ಏರಿಕೆ

869 (714) ಶ್ರೀ ರಾಮಲಿಂಗಾ ರೆಡ್ಡಿ (ಬಿ.ಟಿ.ಎಂ. ಲೇಔಟ್): ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿರುವ ಸರ್ಕಾರಿ ಪಿ.ಯು. ಕಾಲೇಜುಗಳಲ್ಲಿ ಅತಿಥಿ ಉಪನ್ಯಾಸಕರ ಸೇವೆಯನ್ನು ಪಡೆದುಕೊಳ್ಳಲಾಗಿದೆಯೇ;

ಆ) ಹಾಗಿದ್ದಲ್ಲಿ, ಎಷ್ಟು ಅತಿಥಿ ಉಪನ್ಯಾಸಕರ ಸೇವೆಯನ್ನು ಪಡೆಯಲಾಗಿದೆ;

ಇ) ಇವರಿಗೆ ನೀಡುತ್ತಿರುವ ಸಂಬಳವೆಷ್ಟು;

ಈ) ಈ ಅತಿಥಿ ಉಪನ್ಯಾಸಕರು ಸಂಬಳವನ್ನು ಹೆಚ್ಚಿಸಬೇಕೆಂದು ಸರ್ಕಾರಕ್ಕೆ ಮನವಿ ಸಲ್ಲಿಸಿದ್ದಾರೆಯೇ;

ಉ) ಹಾಗಿದ್ದಲ್ಲಿ, ಸರ್ಕಾರ ಈ ಬಗ್ಗೆ ಕೈಗೊಂಡ ಕ್ರಮಗಳೇನು?

ಶ್ರೀ ವಿಶ್ವೇಶ್ವರ ಹೆಗ್ಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):

ಅ) ಹೌದು.

ಆ) 1431 ಅತಿಥಿ ಉಪನ್ಯಾಸಕರನ್ನು ಗೌರವಧನದ ಆಧಾರದ ಮೇಲೆ ನೇಮಿಸಿಕೊಳ್ಳಲಾಗಿದೆ.

ಇ) ಸರ್ಕಾರದ ಆದೇಶ ಸಂಖ್ಯೆ: ಇಡಿ 121 ಡಿಜಿಡಿ 2010 ದಿನಾಂಕ: 01–07–2010ರ ಪ್ರಕಾರ ಮಾಸಿಕ ರೂ. 4800/– ಗೌರವಧನ ನೀಡಲಾಗುತ್ತಿದೆ.

ಈ) ಇಲ್ಲ

ಉ) ಉದ್ಭವಿಸುವುದಿಲ್ಲ.

ಕೆ.ಆರ್.ಎಸ್.ನ ಪದವಿ ಪೂರ್ವ ಕಾಲೇಜು ಕಟ್ಟಡ ಕಾಮಗಾರಿ

870(979) ಶ್ರೀ ರಮೇಶಬಂಡಿಸಿದ್ದೇಗೌಡ ಎ.ಬಿ. (ಶ್ರೀರಂಗಪಟ್ಟಣ): ಮಾನ್ಯ ಪ್ರಾಥಮಿಕ ಮತ್ತು ಪೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?:

ಅ) ಶ್ರೀರಂಗಪಟ್ಟಣ ವಿಧಾನ ಸಭಾ ಕ್ಷೇತ್ರದ ಕೆ.ಆರ್.ಎಸ್. ಪದವಿ ಪೂರ್ವ ಕಾಲೇಜಿನ ಕಟ್ಟಡದ ಕಾಮಗಾರಿಯು ಸ್ಥಗಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಈ ಕಾಲೇಜಿನ ಕಟ್ಟಡದ ಕಾಮಗಾರಿಯು ಸ್ಥಗಿತಗೊಳ್ಳಲು ಕಾರಣವೇನು;

ಇ) ಈ ಕಾಲೇಜಿನ ನೂತನ ಕಟ್ಟಡದ ಕಾಮಗಾರಿಗಾಗಿ ಸರ್ಕಾರ ನಿಗದಿಪಡಿಸಿದ್ದ ಅನುದಾನ ಮೊತ್ತ ಎಷ್ಟು; ಇದುವರೆವಿಗೂ ಬಿಡುಗಡೆ ಮಾಡಿ ವೆಚ್ಚವಾಗಿರುವ ಮೊತ್ತವೆಷ್ಟು; (ವಿವರ ನೀಡುವುದು)

ಈ) ಈ ಕಾಲೇಜು ಕಟ್ಟಡ ಕಾಮಗಾರಿಯು ಸ್ಥಗಿತಗೊಂಡಿರುವುದರಿಂದ ಸ್ಥಳೀಯ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಉ) ಹಾಗಿದ್ದಲ್ಲಿ, ಈ ತೊಂದರೆಯನ್ನು ನಿವಾರಿಸಲು ಸರ್ಕಾರ ಕೂಡಲೇ ಕಟ್ಟಡದ ಕಾಮಗಾರಿಯನ್ನು ಪ್ರಾರಂಭಿಸಲು ಕ್ರಮ ಕೈಗೊಳ್ಳುವುದೇ;